
ಅರ್ಚಕರು ಕೊಟ್ಟ ಗಂಗಾಜಲದಿಂದ, ಬೆಳಗ್ಗೆ ಮನಃಪೂರ್ತಿಯಾಗಿ ಶಿವಲಿಂಗಕ್ಕೆ ಅಭಿಷೇಕ ಮಾಡಿದರು, ಬಿಲ್ವಪತ್ರೆಗಳಿಂದ ಅರ್ಚಿಸಿದರು. ಇದರಿಂದ ಅವರಿಗೆ ತುಂಬಾ ಆನಂದವಾಯಿತು. ಈ ಸಂದರ್ಭದಲ್ಲಿ ಶ್ರೀಮಾತೆಯವರಿಗೆ ತಮ್ಮ ಹಿಂದಿನ ಅವತಾರದ ನೆನಪು ಹಠಾತ್ತಾಗಿ ಬಂದು (ಎಂದರೆ ರಾಮಾವತಾರದಲ್ಲಿ ಸೀತೆಯಾಗಿದ್ದಾಗ), "ನಾನು ಹೇಗೆ ಇಟ್ಟುಹೋಗಿದ್ದೆನೋ ಹಾಗೆಯೇ ಇದೆ" ಎಂದು ತಮ್ಮಷ್ಟಕ್ಕೆ ತಾವೇ ಹೇಳಿಕೊಂಡರಂತೆ. ಅವರಿಗೆ ಅರಿವಿಲ್ಲದೆಯೇ, ಅವರ ಬಾಯಿಂದ ಒಂದು ಅದ್ಭುತ ಸತ್ಯ ಹೊರಬಿದ್ದಿತ್ತು. ಸಂಗಡಿಗರು ಇದರ ಬಗ್ಗೆ ಕುತೂಹಲ ವ್ಯಕ್ತಪಡಿಸಿದಾಗ ಶ್ರೀಮಾತೆಯವರು "ಅದೇನೋ ಸುಮ್ಮನೆ ಹೇಳಿದೆ" ಎಂದು ಬಿಟ್ಟರು. ಆದರೆ ಕೊಲಕತ್ತಾಗೆ ಹಿಂತಿರುಗಿದ ನಂತರವೂ ಅವರ ಬಾಯಿಂದ ಈ ಮಾತು ಒಂದೆರಡು ಬಾರಿ ಬಂದಿತ್ತು. ಯಾತ್ರೆಯಿಂದ ಹಿಂತಿರುಗಿದ ಮೇಲೆ ಕೋಯಲಪಾರಾದ ಕೇದಾರ ಬಾಬು ಒಂದು ದಿನ ಶ್ರೀಮಾತೆಯವರನ್ನು ಕೇಳಿದ, "ರಾಮೇಶ್ವರ ಹೇಗಿತ್ತು?" ಅದಕ್ಕೆ ಉತ್ತರವಾಗಿ ಶ್ರೀಮಾತೆಯವರು, "ಹೇಗೆ ಇಟ್ಟು ಬಂದಿದ್ದೆನೋ ಹಾಗೆಯೇ ಇದ್ದಾನೆ" ಎಂದರು. ಈ ಮಾತು ಅಲ್ಲಿಯೇ ಹೊರಗಡೆ ಓಡಾಡುತ್ತಿದ್ದ ಗೋಲಾಪ್‌ಮಾ ಕಿವಿಗೆ ಬಿದ್ದು, ಆಕೆಗೆ ಕುತೂಹಲ ಕೆರಳಿ, "ಏನು ಹೇಳಿದಿರಿ, ತಾಯಿ?" ಎಂದು ಕೇಳುತ್ತಾ ಒಳಗೆ ಪ್ರವೇಶಿಸಿದಳು. ಸ್ವಲ್ಪ ಸ್ತಂಭಿತರಾದ ಶ್ರೀಮಾತೆಯವರು, "ಏನು, ಇನ್ನೇನು ಹೇಳಲಿ? ನೀವೆಲ್ಲಾ ಅದರ ಬಗ್ಗೆ ಏನು ಹೇಳಿದ್ದಿರೋ ಹಾಗೆಯೇ ಇದ್ದುದನ್ನು ನೋಡಿ ಆನಂದವಾಯಿತು" ಎಂದರು. ಆದರೆ ಗೋಲಾಪ್‌ಮಾ ಅಷ್ಟಕ್ಕೆ ಬಿಡುವವಳಲ್ಲ. "ಇಲ್ಲ, ತಾಯಿ. ನಾನು ಕೇಳಿದ್ದೇನೆ. ಈಗ ಮಾತು ತಿರುಗಿಸಿದರೆ ಆಗದು. ಅಲ್ಲವೇ, ಕೇದಾರ್?" ಹೀಗೆ ಹೇಳುತ್ತಾ ಹೊರಗೆ ಬಂದು ಎಲ್ಲರಿಗೂ ಇದನ್ನು ತಿಳಿಸಿದಳು.


ಶ್ರೀಮಾತೆಯವರಿಂದ ರಾಮೇಶ್ವರ ಅರ್ಚನೆ

ಭಕ್ತರ ವಿಶ್ವಾಸವೇನೆಂದರೆ ತ್ರೇತಾಯುಗದಲ್ಲಿ ಶ್ರೀರಾಮಚಂದ್ರನ ಮಡದಿ ಸೀತೆಯಾಗಿ ಸಮುದ್ರತೀರದಲ್ಲಿ ಮರಳಿನ ಲಿಂಗವನ್ನು ನಿರ್ಮಿಸಿ, ಪೂಜೆ ಮಾಡಿದ ಸೀತಾಮಾತೆಯೇ ಇಂದು ಶ್ರೀಮಾತೆ ಶಾರದಾದೇವಿಯಾಗಿ ಜನಿಸಿದ್ದಾರೆ ಎಂದು. ಶ್ರೀಮಾತೆಯವರು ರಾಮೇಶ್ವರಕ್ಕೆ ಹೋದಾಗ, ಆ ಘಟನೆ ಸುಸ್ಪಷ್ಟವಾಗಿ ನೆನಪಿಗೆ ಬಂದು, ಈ ಮಾತುಗಳನ್ನು ಆಡಿದ್ದಾರೆ.

ಈ ರಾಮೇಶ್ವರ ಯಾತ್ರೆಯಲ್ಲಿಯೇ ಮತ್ತೊಂದು ವಿಶೇಷ ಘಟನೆ ನಡೆಯಿತು. ಅದನ್ನು ಶ್ರೀಮಾತೆಯವರಿಂದಲೇ ಕೇಳೋಣ: "ರಾಮನಾಡಿನ ರಾಜ ಒಂದು ದಿನ ತನ್ನ ರಾಜಭಂಡಾರವನ್ನು ನಮಗೆ ತೋರಿಸಲು ಅವರ ಮಂತ್ರಿಗಳಿಗೆ ಆಜ್ಞೆಯಿತ್ತ. ಅಲ್ಲಿನ ಆಭರಣಗಳಲ್ಲಿ ನನಗೆ ಯಾವುದಾದರೂ ಇಷ್ಟವಾದರೆ ತೆಗೆದುಕೊಳ್ಳಲು ಮಂತ್ರಿಗಳು ಹೇಳಿದರು. ನಾನೇನು ಹೇಳಲಿ? 'ಶಶಿ (ರಾಮಕೃಷ್ಣಾನಂದ) ಎಲ್ಲಾ ವ್ಯವಸ್ಥೆಯನ್ನೂ ಮಾಡಿದ್ದಾನೆ, ನನಗಾವುದರ ಅವಶ್ಯಕತೆಯೂ ಇಲ್ಲ' ಎಂದು ಹೇಳಿದೆ. ಆದರೆ ತಕ್ಷಣ ಅನಿಸಿತು, ಇದರಿಂದ ರಾಜನ ಮನಸ್ಸಿಗೆ ನೋವಾಗಬಹುದು ಎಂದು. ಅದಕ್ಕೇ ಹೇಳಿದೆ, 'ಆಗಲಿ, ರಾಧುವಿಗೆ ಏನಾದರೂ ಬೇಕಾದರೆ ತೆಗೆದುಕೊಳ್ಳಬಹುದು' ಎಂದು. ನಂತರ ಹೊಳೆಯುತ್ತಿರುವ ಆ ಎಲ್ಲಾ ಚಿನ್ನದ ಆಭರಣಗಳನ್ನು ನೋಡಿ, ನನ್ನ ಎದೆ ಹೊಡೆದುಕೊಳ್ಳಲಾರಂಭಿಸಿತು. ಉದ್ವೇಗದಿಂದ, ಹೃತ್ಪೂರ್ವಕವಾಗಿ ಠಾಕೂರರನ್ನು ಪ್ರಾರ್ಥಿಸಿದೆ, 'ರಾಧುವಿನ ಮನಸ್ಸಿನಲ್ಲಿ ಯಾವ ಪ್ರಲೋಭನೆಯೂ ಉಂಟಾಗದಿರಲಿ' ಎಂದು. ತಕ್ಷಣ ರಾಧು ಉತ್ತರಿಸಿದಳು, 'ಇದರಲ್ಲಿ ನನಗೆ ಬೇಕಾದುದು ಯಾವುದೂ ಇಲ್ಲ. ಇದಾವುದೂ ನನಗೆ ಬೇಡ. ನನ್ನ ಪೆನ್ಸಿಲ್ ಕಳೆದುಹೋಗಿದೆ. ಒಂದು ಪೆನ್ಸಿಲ್ ಕೊಂಡುಕೊಟ್ಟರೆ ಸಾಕು.' ಆಗ ನನಗೆ 'ಹಾಯ್' ಎನಿಸಿತು. ಠಾಕೂರರು ನನ್ನ ಪ್ರಾರ್ಥನೆಯನ್ನು ಕೇಳಿದ್ದರು. ಹೊರಗೆ ಬಂದು ರಸ್ತೆಯ ಬದಿಯಿದ್ದ ಚಿಕ್ಕ ಅಂಗಡಿಯಲ್ಲಿ ಅರ್ಧಾಣೆ ಕೊಟ್ಟು, ಅವಳಿಗೊಂದು ಪೆನ್ಸಿಲ್ ಕೊಂಡುಕೊಟ್ಟೆ."

ಶ್ರೀಮಾತೆ ರಾಮೇಶ್ವರದಿಂದ ಮದ್ರಾಸಿಗೆ ಹಿಂತಿರುಗಿ ಅಲ್ಲಿ ಕೆಲವು ದಿನ ಇದ್ದು, ಅದನ್ನೂ ಒಂದು ಪವಿತ್ರ ತೀರ್ಥಕ್ಷೇತ್ರವಾಗಿ ಪರಿವರ್ತಿಸಿದರು.

# ಉದ್ಯಾನ ನಗರಿಯಲ್ಲಿ ಶ್ರೀದುರ್ಗಾ

ಪ್ರವ್ರಾಜಿಕಾ ಅತುಲಪ್ರಾಣಾ



ಬೆಂಗಳೂರು ಆಶ್ರಮದ ಹಳೆಯ ದೃಶ್ಯ

೧೯೧೧ನೇ ಇಸವಿಯಲ್ಲಿ ಶ್ರೀರಾಮಕೃಷ್ಣರ ಭಕ್ತರಾದ ಬಲರಾಮ್ ಬೋಸರ ಪುತ್ರ ರಾಮಕೃಷ್ಣ ಬೋಸರು ತಮ್ಮ ತಾಯಿಯ ಆಸೆಯನ್ನು ಪೂರೈಸಲು ಶ್ರೀಮಾತೆಯವರನ್ನು ಕೊಠಾರ್‌ನ ತಮ್ಮ ಸ್ವಂತ ಜಮೀನಿಗೆ ಕರೆತಂದರು. ಇಲ್ಲಿಂದಲೇ ಶ್ರೀಮಾತೆಯವರ ಒಪ್ಪಿಗೆ ಪಡೆದು ರಾಮೇಶ್ವರ ತೀರ್ಥಯಾತ್ರೆಗೆ ವ್ಯವಸ್ಥೆ ಮಾಡಲು ಮುಂದಾದರು.

ಶ್ರೀಮಾತೆಯವರು ರಾಮೇಶ್ವರ ತೀರ್ಥಯಾತ್ರೆಗೆ ಬರುವರೆಂಬ ವಿಷಯ ತಿಳಿದ ಮದ್ರಾಸಿನ ರಾಮಕೃಷ್ಣ ಮಠದ ಅಧ್ಯಕ್ಷರಾದ ಸ್ವಾಮಿ ರಾಮಕೃಷ್ಣಾನಂದರು ಶ್ರೀಮಾತೆ ಮತ್ತು ಅವರ ಸಂಗಡಿಗರಿಗೆ ಬೇಕಾದ ಎಲ್ಲ ವ್ಯವಸ್ಥೆಯನ್ನೂ ಮಾಡಿದರು. ಆಶ್ಚರ್ಯವೆಂದರೆ, ಮೊದಮೊದಲಿಗೆ ಶ್ರೀಮಾತೆಯವರು ಬೆಂಗಳೂರಿಗೆ ಬರುವ ಕಾರ್ಯಕ್ರಮವೇ ಇರಲಿಲ್ಲ. ಅವರನ್ನು ಬೆಂಗಳೂರಿಗೆ ಕರೆತರುವಂತೆ, ಬೆಂಗಳೂರಿನ ಭಕ್ತರಾದ ಡಾ. ವೆಂಕಟರಾಘವನ್ ಎಂಬುವವರು ಸ್ವಾಮಿ ರಾಮಕೃಷ್ಣಾನಂದರಿಗೆ ಕಾಗದವನ್ನು ಬರೆದರೂ, ಏನೂ ಪ್ರಯೋಜನವಾಗಲಿಲ್ಲ. ಆ ಕಾಲದಲ್ಲಿ ಬೆಂಗಳೂರಿನಲ್ಲಿ ಪ್ಲೇಗ್ ಕಾಯಿಲೆ ಹರಡಿದ್ದ ಕಾರಣ, ರಾಮಕೃಷ್ಣ ಮಠದ ಮುಖ್ಯಕೇಂದ್ರವಾದ ಬೇಲೂರುಮಠದ ಸ್ವಾಮಿಗಳು ಶ್ರೀಮಾತೆಯವರು ಬೆಂಗಳೂರಿಗೆ ಹೋಗಲು ಸಮ್ಮತಿಸಿರಲಿಲ್ಲ. ಆದರೆ ಆಗ ಬೆಂಗಳೂರು ರಾಮಕೃಷ್ಣ ಮಠದ ಅಧ್ಯಕ್ಷರಾಗಿದ್ದ ಸ್ವಾಮಿ ನಿರ್ಮಲಾನಂದರು ಸುಲಭಕ್ಕೆ ಸೋಲನ್ನು ಒಪ್ಪಿಕೊಳ್ಳುವವರಾಗಿರಲಿಲ್ಲ. ಅವರು ಸ್ವತಃ ಮದ್ರಾಸಿಗೆ ಹೋದರು. ಸ್ವಾಮಿ ರಾಮಕೃಷ್ಣಾನಂದರನ್ನು ಈ ರೀತಿ ಕೇಳಿಕೊಂಡರು: "ಬಹಳ ಭಕ್ತರು ಕೇವಲ ಒಂದೇ ಒಂದು ಸಲವಾದರೂ ಶ್ರೀಮಾತೆಯವರ ದರ್ಶನ ಮಾಡಲು ಕಾತರರಾಗಿದ್ದಾರೆ. ಕೃಪೆಮಾಡಿ ಶ್ರೀಮಾತೆಯವರು ತಮ್ಮ ಪಾದಧೂಳಿನಿಂದ ಬೆಂಗಳೂರನ್ನು ಪವಿತ್ರ ಮಾಡಲಿ. ಶ್ರೀಮಾತೆಯವರಿಗೆ ಯಾವ ತೊಂದರೆಯೂ ಆಗದಂತೆ ನಾನು ನೋಡಿಕೊಳ್ಳುತ್ತೇನೆ." ಹೀಗೆ ಖಚಿತ ಭರವಸೆಯನ್ನು ನೀಡುವುದರ ಮೂಲಕ ಸ್ವಾಮಿ ನಿರ್ಮಲಾನಂದರು, ಉದ್ಯಾನನಗರಿಯಾದ ಬೆಂಗಳೂರಿಗೆ ಶ್ರೀಮಾತೆಯವರನ್ನು ಬರಮಾಡಿಕೊಳ್ಳುವ ತಮ್ಮ ಮಹದಾಸೆಯನ್ನು ಪೂರೈಸಿಕೊಂಡರು.

ರಾಮೇಶ್ವರ ಯಾತ್ರೆಯ ನಂತರ ಭಕ್ತರ ಆಕಾಂಕ್ಷೆಗೆ ಮಣಿದು ಶ್ರೀಮಾತೆ, ಅವರ ಸಂಗಡಿಗರು, ಸ್ವಾಮಿ ರಾಮಕೃಷ್ಣಾನಂದರು, ಸ್ವಾಮಿ ನಿರ್ಮಲಾನಂದರು – ಎಲ್ಲರೂ ಜೊತೆಯಲ್ಲಿಯೇ ಬೆಂಗಳೂರಿಗೆ ಬಂದರು. ದೈವೀಮಹಿಮೆಯಿಂದ ಕೂಡಿದ ಈ ಮಾತೃಮೂರ್ತಿಯ ದಿವ್ಯಸಾನ್ನಿಧ್ಯವನ್ನು ಪಡೆದ ಈ ಉದ್ಯಾನನಗರಿಯು ಪುನೀತವಾಯಿತು.

ಅಂದು ೧೯೧೧ರ ಮಾರ್ಚ್ ೨೪, ಶುಕ್ರವಾರ, ಬಂಗಾಳಿ ಪಂಚಾಂಗದ ಪ್ರಕಾರ ಚೈತ್ರ ಮಾಸದ ದಶಮಿ. ವಸಂತ ಕಾಲ, ಅದರಲ್ಲೂ ಚೈತ್ರಮಾಸವು ದೇವಿಯ ಪೂಜೆಗೆ ಪ್ರಶಸ್ತವೆಂದು ಪ್ರಾಚೀನಕಾಲದಿಂದ ನಂಬಿಕೆ. ಹೀಗಾಗಿ ವಸಂತಕಾಲದ ವಾಸಂತಿ ಪೂಜೆಯ ಕಾಲದಲ್ಲಿಯೇ ಬೆಂಗಳೂರಿಗೆ ಆಗಮಿಸಿದ ಶ್ರೀಮಾತೆಯವರು ಪರಿಪೂರ್ಣ ದೇವೀಭಾವದಲ್ಲೇ ಇದ್ದಂತೆ ಕಂಗೊಳಿಸಿದರು ಎನ್ನುವುದರಲ್ಲಿ ಸಂದೇಹವೇ ಇಲ್ಲ.

ಋತುಗಳ ರಾಜ ವಸಂತ. ಆತನೇ ಮಾರುವೇಷದ ಈ ದುರ್ಗೆಯನ್ನು ಸ್ವಾಗತಿಸಲು ಸ್ವತಃ ತಾನೇ ಉದ್ಯಾನ ನಗರಿಯನ್ನು ಪುಷ್ಪಾಭರಣಗಳಿಂದ ಅಲಂಕರಿಸಿದ್ದಾನೆ ಎಂಬಂತೆ ಭಾಸವಾಗುತ್ತಿತ್ತು. ಈ ಜೀವಂತದುರ್ಗೆಗೆ ತಮ್ಮ ಹೃದಯದಾಳದ ಪ್ರಾರ್ಥನೆಯನ್ನು ಸಲ್ಲಿಸಲು ಬೆಂಗಳೂರಿನ ರೈಲ್ವೇನಿಲ್ದಾಣದಲ್ಲಿ ಸಾವಿರಾರು ಜನರು ನೆರೆದಿದ್ದರು.

**ಶ್ರೀಮಾತೆಯವರು ಬೆಂಗಳೂರಿನ ರಾಮಕೃಷ್ಣ ಮಠದಲ್ಲಿ ತಂಗಿ ಅದನ್ನು ಒಂದು ಪವಿತ್ರಕ್ಷೇತ್ರವನ್ನಾಗಿ ಪರಿವರ್ತಿಸಿದರು. ಶ್ರೀಮಾತೆಯವರ ಈ ಐತಿಹಾಸಿಕ ಬೆಂಗಳೂರು ಭೇಟಿಯ ನಿರೂಪಣೆಯನ್ನು ಸೊಗಸಾಗಿ ಮಾಡಿರುವ ಪೂಜ್ಯ ಮಾತಾಜಿಯವರು ಶ್ರೀಶಾರದಾಮಠದ ಬೆಂಗಳೂರಿನ ಶ್ರೀಶಾರದಾ ಮಠದಲ್ಲಿ ಇದ್ದಾರೆ. ಇವರು ತುಮಕೂರು ಜಿಲ್ಲೆಯ ಕೊರಟಗೆರೆ ತಾಲ್ಲೂಕಿನಲ್ಲಿರುವ ಜುಂಜುರಾಮನಹಳ್ಳಿಯಲ್ಲಿ ಆರ್ಥಿಕವಾಗಿ ಹಿಂದುಳಿದ ಮಹಿಳೆಯರ ಮತ್ತು ಮಕ್ಕಳ ಪುರೋಭಿವೃದ್ಧಿಗಾಗಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.**

ಬಸವನಗುಡಿ ರಸ್ತೆಯಲ್ಲಿರುವ ರಾಮಕೃಷ್ಣ ಮಠದವರೆಗೆ, ಶ್ರೀಮಾತೆ ಹೋಗುವ ರಸ್ತೆಯುದ್ದಕ್ಕೂ ಪುಷ್ಪವೃಷ್ಟಿ ಆಗುತ್ತಿತ್ತು. ಮುಂದೆ ಶ್ರೀಮಾತೆಯವರೇ ಹೀಗೆ ಹೇಳುತ್ತಿದ್ದರು: "ಬೆಂಗಳೂರಿನಲ್ಲಿ ನನ್ನನ್ನು ನೋಡುವುದಕ್ಕಾಗಿ ಎಷ್ಟೊಂದು ಜನ ಬಂದಿದ್ದರು! ನಾನು ರೈಲಿನಿಂದ ಇಳಿಯುತ್ತಲೇ ನನ್ನ ಮೇಲೆ ಹೂವಿನ ಮಳಗರೆದರು. ರಸ್ತೆಯ ಮೇಲೆಲ್ಲ ಹೂವು! ಶ್ರೀರಾಮಕೃಷ್ಣರ ಸಂದೇಶ ಎಲ್ಲೆಡೆಯೂ ಹರಡಿದೆ. ಆದ್ದರಿಂದಲೇ ಇಷ್ಟೊಂದು ಜನ ಬರುವುದು."

ಶ್ರೀಮಾತೆಯವರು ಕುಳಿತಿದ್ದ ಗಾಡಿ ರಾಮಕೃಷ್ಣಮಠದ ಬಳಿ ನಿಂತಿತು. ಕೂಡಲೇ ಸ್ವಾಮಿ ನಿರ್ಮಲಾನಂದರು ಶ್ರೀಮಾತೆಯವರು ನಿತ್ಯಪೂಜೆ ಮಾಡುವ ಪೂಜಾಪೆಟ್ಟಿಗೆಯನ್ನು ತಲೆಯ ಮೇಲೆ ಹೊತ್ತುಕೊಂಡು, ಆಶ್ರಮದ ಒಂದು ಕೊಠಡಿಯ ಮೂಲೆಯಲ್ಲಿಟ್ಟರು. ಆ ಕೊಠಡಿಯಲ್ಲೇ ಶ್ರೀಮಾತೆ ಶಾರದಾದೇವಿಯವರು ಮೂರು ರಾತ್ರಿ ಇದ್ದರು. ಇಂದಿಗೂ ಅದೇ ಕೊಠಡಿಯೇ ಶ್ರೀಮಾತೆಯವರ ಪೂಜಾಸ್ಥಾನವಾಗಿದೆ. ಇಲ್ಲಿಯೂ ಮದ್ರಾಸಿನಂತೆಯೇ ಶ್ರೀಮಾತೆಯವರಿಗೆ ಸಕಲ ರೀತಿಯಲ್ಲಿಯೂ ಅನುಕೂಲ ಮಾಡಿಕೊಡಲು, ಮಾತೃಭಕ್ತ ಸ್ವಾಮಿ ರಾಮಕೃಷ್ಣಾನಂದರು ಸ್ವಯಂ ಕಂಕಣಬದ್ಧರಾಗಿ ನಿಂತಿದ್ದರು. ಅವರೇ ಪ್ರತಿದಿನ ಶ್ರೀಮಾತೆಯವರ ಪೂಜೆಗಾಗಿ ಒಳ್ಳೆಯ ಹೂವುಗಳನ್ನು ಆಯ್ದು ತಂದುಕೊಡುತ್ತಿದ್ದರು.

ಶ್ರೀಮಾತೆಯವರ ದರ್ಶನಕ್ಕಾಗಿ ಪ್ರತಿದಿನ ಅನೇಕ ಭಕ್ತರು ಬರುತ್ತಿದ್ದರು. ಅವರಿಗೆಲ್ಲ ಶ್ರೀಮಾತೆಯ ಕೊಠಡಿಯ ಬಾಗಿಲು ಸದಾ ತೆರೆದಿತ್ತು. ಎಲ್ಲರ ಮೇಲೂ ಶ್ರೀಮಾತೆಯವರ ಪ್ರೀತಿ ಸಮಾನವಾಗಿ ಹರಿದಿತ್ತು. ಶ್ರೀಮಾತೆ ಶಾರದಾದೇವಿಯವರು ಬೆಂಗಳೂರಿನ ರಾಮಕೃಷ್ಣ ಮಠದಲ್ಲಿ ವಾಸ ಮಾಡಿದ್ದು ಕೇವಲ ಮೂರು ದಿನ. ಆದರೆ ಆ ಅವಧಿಯಲ್ಲಿ ನಡೆದ ಘಟನೆಗಳು ಸುಸ್ಮರಣೀಯ:

ಮಾರುವೇಷದ ದುರ್ಗೆಗೆ ತನ್ನ ಪತಿ ಶಿವನನ್ನು ನೋಡಬೇಕೆಂಬ ಆಸೆಯಾಯಿತೇನೋ! ಶ್ರೀಮಾತೆಯವರು ತಮ್ಮ ಸಂಗಡಿಗರೊಡನೆ ಮಠದ ಹತ್ತಿರವೇ ಇರುವ ಗವಿಪುರಂನ ಗಂಗಾಧರೇಶ್ವರ ದೇವಸ್ಥಾನದಲ್ಲಿ ಅಚಲನಾಗಿ ಕುಳಿತಿರುವ ಶಿವನ ದರ್ಶನ ಮಾಡಲು ಬೆಳಗ್ಗೆಯೇ ಹೋದರು. ಆಗ ಮಠಕ್ಕೆ ಭಕ್ತರು ಇನ್ನು ಯಾರೂ ಬಂದಿರಲಿಲ್ಲ. ಹಿಂದಿರುಗಿದಾಗ ಬಹಳ ಭಕ್ತರು ಶ್ರೀಮಾತೆಯ ದರ್ಶನಕ್ಕಾಗಿ ನೆರೆದಿದ್ದರು. ಶ್ರೀಮಾತೆ ಶಾರದಾದೇವಿಯವರು ಗಾಡಿಯಿಂದ ಇಳಿದ ಕೂಡಲೇ, ನೆರೆದ ಭಕ್ತರೆಲ್ಲ ದೇದೀಪ್ಯಮಾನವಾಗಿ ಬೆಳಗುತ್ತಿರುವ ಆ ಶಾಂತ ಗಂಭೀರ ಮೂರ್ತಿಯ ದರ್ಶನಮಾತ್ರದಿಂದಲೇ ಆನಂದದಿಂದ ಪುಳಕಿತರಾದರು. ತಾಯಿಗೆ ಸಾಷ್ಟಾಂಗ ನಮಸ್ಕಾರ ಮಾಡುತ್ತಾ ತಮ್ಮನ್ನು ತಾವೇ ಮರೆತರು. ಎಲ್ಲೆಲ್ಲೂ ಸ್ನಿಗ್ಧ, ಸುಮಧುರ, ಶಾಂತ ವಾತಾವರಣ ಏರ್ಪಟ್ಟಿತ್ತು.

ಶ್ರೀಮಾತೆಯವರು ಮೆಲ್ಲಗೆ ಮೌನವಾಗಿ ನಡೆದು ಬಂದು, ಪ್ರಾರ್ಥನಾ ಮಂದಿರವನ್ನು ಪ್ರವೇಶಿಸಿ, ಶ್ರೀರಾಮಕೃಷ್ಣರ ಭಾವಚಿತ್ರದ ಮುಂದೆ ಕುಳಿತರು. ಆಗಮಿಸಿದ ಜನರೂ ಬಂದು ಅವರ ಸುತ್ತ ಕುಳಿತುಕೊಂಡರು. ಈಗ ಪುನಃ ಅದೇ ಮೌನವ್ಯಾಖ್ಯಾನ, ತನ್ಮೂಲಕ ಸಂಶಯನಿವಾರಣೆ. ಈ ಗಾಢ ನೀರವತೆಯನ್ನು ಸೀಳಿ ಶ್ರೀಮಾತೆಯವರು ಬಳಿಯಲ್ಲಿಯೇ ಕುಳಿತಿದ್ದ ಸ್ವಾಮಿ ವಿಶುದ್ಧಾನಂದರಿಗೆ ಹೇಳುತ್ತಾರೆ: "ಅಯ್ಯೋ, ನನಗೆ ಇವರ ಭಾಷೆ ಗೊತ್ತಿಲ್ಲವಲ್ಲ! ಇವರೊಡನೆ ಎರಡು ಮಾತನಾಡುವುದಕ್ಕೆ ಸಾಧ್ಯವಾಗಿದ್ದರೆ ಇವರಿಗೆಷ್ಟೋ ಸಮಾಧಾನವಾಗುತ್ತಿತ್ತು." ಸ್ವಾಮಿ ವಿಶುದ್ಧಾನಂದರು ಈ ಮಾತುಗಳನ್ನು ಅನುವಾದಿಸಿ ಭಕ್ತರಿಗೆ ಹೇಳಿದರು. ಆಗ ಭಕ್ತರೆಲ್ಲ ಹೇಳುತ್ತಾರೆ: "ಇಲ್ಲ, ಇಲ್ಲ. ಪರವಾಗಿಲ್ಲ. ನಿಜಕ್ಕೂ ನಮ್ಮ ಹೃದಯ ತುಂಬಿ ಬಂದಿದೆ. ಇಂಥ ಸಂದರ್ಭದಲ್ಲಿ ಮಾತು ಬೇಕಿಲ್ಲ." ಆಶ್ಚರ್ಯ! ಶ್ರೀಮಾತೆಯವರೂ ಅದ್ಭುತ! ಅವರ ಆಧ್ಯಾತ್ಮಿಕ ಸಂತಾನವಾದ ಭಕ್ತರೂ ಅದ್ಭುತ!

ಈಗಲೂ ಬೆಂಗಳೂರಿಗೆ ಪ್ರವಾಹದಂತೆ ಆಗಮಿಸುತ್ತಿರುವ ಭಕ್ತರ ಮನಃಪಟಲದಲ್ಲಿ ಚಿರಸ್ಥಾಯಿಯಾಗಿ ನಿಲ್ಲುವ ಮತ್ತೊಂದು ಅವಿಸ್ಮರಣೀಯ ಘಟನೆ ಹೀಗಿದೆ: **ತಾಯಿ ದುರ್ಗೆಯ ನಿಜವನರಿಯುವ ಧೀರರಾರೋ ಜಗದೊಳು!** ಶ್ರೀಮಾತೆ ಶಾರದಾದೇವಿಯವರದು ವಾತದ ಶರೀರವಾದ್ದರಿಂದ ಸಮತಟ್ಟಿನ ನೆಲದಲ್ಲಿ ನಡೆಯಲೂ ಕಷ್ಟಪಡುತ್ತಿದ್ದರು. ಆದರೆ ಆಶ್ಚರ್ಯ! ಅಂದು ಸಂಜೆ ಈ ಜಗನ್ಮಾತೆಗೆ ತಮ್ಮ ಮೂಲಸ್ವರೂಪದ ನೆನಪು ಮರುಕಳಿಸಿತೇನೋ. ಆಶ್ರಮದ ಪಶ್ಚಿಮ ದಿಕ್ಕಿನಲ್ಲಿರುವ ಸಣ್ಣ ಕಲ್ಲುಗುಡ್ಡವನ್ನು ಹತ್ತಿ 'ಪರ್ವತವಾಸಿನಿ'ಯಾಗಿಬಿಟ್ಟರು. ಪಶ್ಚಿಮ ದಿಗಂತದಲ್ಲಿ ತನ್ನ ಕೆಂಪಾದ ಕಿರಣಗಳಿಂದ ನೀಲಾಕಾಶವನ್ನು ಸುಂದರವಾದ ಚಿತ್ರಗಳಿಂದ ಅಲಂಕರಿಸಿ, ವಿಶ್ರಾಂತಿ ತೆಗೆದುಕೊಳ್ಳಲು ವಿರಮಿಸುತ್ತಿರುವ ರವಿಯನ್ನು ಬೀಳ್ಕೊಡಲು ಶ್ರೀಮಾತೆ ಅಲ್ಲಿಗೆ ಬಂದಂತಿತ್ತು. ಜ್ಯೋತಿರ್ಮಯಿಯಾಗಿ ಸ್ವಯಂಪ್ರಭೆಯಿಂದ ಬೆಳಕನ್ನು